# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 258/2024**

| | | | |
|---|---|---|---|
| ಸಾಕ್ಷಿದಾರರು | : | ಆಂಥೋನಿ ಉರುಫ್ ಮನು | ಸಿ.ಡಬ್ಲ್ಯೂ : 6 |
| ತಂದೆ ಹೆಸರು | : | ಅಲೆಕ್ಸಾಂಡರ್ ದಾಸ್ | ಪಿ.ಡಬ್ಲ್ಯೂ : 2 |
| ವಯಸ್ಸು | : | 32 ವರ್ಷ | |
| ವೃತ್ತಿ | : | ಪೈಂಟರ್ | |
| ವಾಸ ಸ್ಥಳ | : | ಜಯಂತಿ ನಗರ | |

**ಸಾಕ್ಷಿಯನ್ನು ದಿಃ 02.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 28.07.2024 ರ ಪಂಚನಾಮೆ ಮತ್ತು ಪೊಲೀಸ್ ನೋಟಿಸನ್ನು ಸಾಕ್ಷಿ ನೋಡಿ ತನ್ನ ಸಹಿ ಎಂದು ಗುರುತಿಸಿದ್ದು ಸದರಿ ಎರಡು ದಾಖಲಾತಿಗಳನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು ನಿಪಿ.3 ಎ ಎಂದು, ನೋಟೀಸನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ದಿಃ 28.07.2024 ರಂದು ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಒಂದು ಆಪೇ ಆಟೋ ಸಂಃ ಕೆಎ-43/3094 ವನ್ನು ಜಪ್ತಿ ಮಾಡುವಾಗ ಸದರಿ ಸಹಿಗಳನ್ನು ಮಾಡಿದೆನು. ನಿಪಿ.3 ನ್ನು ಮಾಡುವಾಗ ಆರೋಪಿ, ಚಾಸಾ.5 ಮತ್ತು ನಾನು ಇದ್ದೆವು. ಆಟೋ ಜಪ್ತಿ ಮಾಡುವಾಗ ಪೊಲೀಸರು

ಫೋಟೋ ತೆಗೆಸಿದರು. ಸದರಿ ಫೋಟೋವನ್ನು ಈಗ ನೋಡುತ್ತಿದ್ದು ನಿಪಿ.4 ಎಂದು ಗುರುತಿಸಲಾಯಿತು. ರವಿಕುಮಾರ್ ಮತ್ತ ರಾಜೇಶ್ ರವರ ನಡುವೆ ದುಡ್ಡಿನ ವಿಚಾರಕ್ಕಾಗಿ ಆದ ಗಲಾಟೆ ವಿಚಾರವಾಗಿ ಸದರಿ ಆಟೋವನ್ನು ಪೊಲೀಸರು ಜಪ್ತಿ ಮಾಡಿದರು. ಆರೋಪಿಯನ್ನು ಮತ್ತು ಫೋಟೋದಲ್ಲಿರುವ ಆಟೋವನ್ನು ಸಾಕ್ಷಿ ಗುರುತಿಸಿದ್ದು ಮತ್ತೊಂದು ಫೋಟೋವನ್ನು ನಿಪಿ.5 ಎಂದು, ಸಿಡಿಯನ್ನು ನಿಪಿ.6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2. ದಿಃ 28.07.2024 ರಂದು ಬರಬೇಕೆಂದು ಪೊಲೀಸರು ನೊಟೀಸನ್ನು ನೀಡಿದ್ದರು. ಸಾಕ್ಷಿ ನಂತರ ನೋಟೀಸನ್ನು ನಾನು ತೆಗೆದುಕೊಂಡಿಲ್ಲವೆಂದು ಹೇಳುತ್ತಾರೆ. ಆರೋಪಿ ಮತ್ತು ಚಾಸಾ.1 ರವರು ಜಯಂತಿನಗರದವರು ಎಂದರೆ ಸರಿ. ಚಾಸಾ.1 ಮತ್ತು ನೀವು ಸ್ನೇಹಿತರು ಎಂದರೆ ಸರಿ. ನಿಪಿ.3 ರಲ್ಲಿ ಪೊಲೀಸರು ಏನೆಲ್ಲಾ ಬರೆದುಕೊಂಡರು ಎಂದು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ನ್ನು ಮಾಡಿದ ಸ್ಥಳದ ಚೆಕ್ಕುಬಂದಿ ನನಗೆ ಈಗ ಹೇಳಲು ಗೊತ್ತಿಲ್ಲ. ಚಾಸಾ.1 ಮತ್ತು ನೀವು ಸ್ನೇಹಿತರಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನಿಪಿ.3 ಕ್ಕೆ ಸಹಿಯನ್ನು ಬೆಳಿಗ್ಗೆ 11.30 ಗಂಟೆಗೆ ಹಾಕಿದೆನು. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ.4 ರಿಂದ 6 ಪೊಲೀಸರು, ಚಾಸಾ.1

*ನೀವುಗಳು ಪರಸ್ಪರ ಷಾಮೀಲಾಗಿ ಪ್ರಕರಣಕ್ಕಾಗಿ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ಚಾಸಾ. 1 ರವರು ಆರೋಪಿಗೆ ದುಡ್ಡು ಕೊಟ್ಟಿರುವುದನ್ನು ನಾನು ಕಣ್ಣಾರೆ ನೋಡಿಲ್ಲ. ಚಾಸಾ. 1 ರವರು ಆರೋಪಿ ಮೇಲೆ ಹೊಂದಿದ್ದ ಹಳೇ ದ್ವೇಷದ ಹಿನ್ನೆಲೆಯಲ್ಲಿ ಸುಳ್ಳು ದುಾರು ನೀಡಿರುತ್ತಾರೆ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***